## ಗಂಡನ್ನು ಹೆಣ್ಣಾಗಿಸುವ ಆಹಾರ ಪೊಟ್ಟಣ

ಸಿದ್ಧಪಡಿಸಿದ ಆಹಾರವನ್ನು ಕಟ್ಟುವ ಪೊಟ್ಟಣ ತಯಾರಿಕೆಯಲ್ಲಿ ಬಳಸಲಾಗುವ ಬಿಸ್‌ಫೆನಾಲ್ ಎ ಎಂಬ ರಾಸಾಯನಿಕವು ಗಂಡಸನ್ನು ಹೆಂಗಸಾಗಿಸಿ ತೊಂದರೆಗೆ ಸಿಲುಕಿದ ಘಟನೆಯೊಂದು ವಿಜ್ಞಾನಿಗಳ ತಲೆಕೆಡಿಸಿತ್ತು.

ಬಿಸ್‌ಫೆನಾಲ್ ಎ (ಬಿಪಿಎ) ಎಂಬ ರಾಸಾಯನಿಕವು ಪ್ಲಾಸ್ಟಿಕ್ ವಸ್ತು ಗಟ್ಟಿಯಾಗಿರುವಂತೆ ಮಾಡುವಲ್ಲಿ ಸಹಕಾರಿ. ಪ್ಲಾಸ್ಟಿಕ್ ತಯಾರಿಕೆಯಲ್ಲಿ ವಿಶ್ವದಲ್ಲೇ ಹೆಚ್ಚು ಬಳಕೆಯಾಗುವ ರಾಸಾಯನಿಕ ಬಿಪಿಎ. ನಾವು ಬಳಸುವ ಪ್ರತಿನಿತ್ಯದ ವಸ್ತುಗಳಲ್ಲಿ ಬಿಪಿಎ ಕೂಡ ಒಂದು. ಮಕ್ಕಳ ನೀರು ಕುಡಿಯುವ ಬಾಟಲಿಯಿಂದ ಹಿಡಿದು ಸಿಡಿ ಕೇಸ್, ಆಹಾರ ಹಾಗೂ ಪಾನೀಯಗಳ ಪ್ಯಾಕಿಂಗ್‌ಗಳಲ್ಲೂ ಬಳಕೆಯಾಗುತ್ತಿದೆಯಂತೆ.

ಅಮೆರಿಕದ ಮಿಸ್ಸೂರಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಬಿಪಿಎ ಕುರಿತು ನಡೆಸಿದ ಸಂಶೋಧನೆಯ ಪ್ರಕಾರ ದಿನನಿತ್ಯ ಬಳಸುವ ಹಲವಾರು ವಸ್ತುಗಳಲ್ಲಿರುವ ಬಿಪಿಎದಲ್ಲಿ ಈಸ್ಟ್ರೋಜೆನ್ ಅಂಶ ಇದೆಯಂತೆ. ಇದಕ್ಕಾಗಿ ಅವರು ಇಲಿ ಮೇಲೆ ಸಂಶೋಧನೆ ನಡೆಸಿದ್ದಾರೆ. ಗಂಡು ಇಲಿಯೊಂದಕ್ಕೆ ಬಿಸ್‌ಫೆನಾಲ್ ಎ ನೀಡಲಾಯಿತು. ಕೆಲವು ದಿನಗಳ ನಂತರ ಅವುಗಳು ಹೆಣ್ಣು ಇಲಿಗಳಂತೆ ವರ್ತಿಸಲು ಪ್ರಾರಂಭಿಸಿತಂತೆ.

ಇದೇ ಮಾದರಿಯ ಪರೀಕ್ಷೆಯನ್ನು ಬಣ್ಣದ ಇಲಿಗಳ ಮೇಲೆ ಪ್ರಯೋಗಿಸಲಾಯಿತು. ಆದರೆ ಅವು ಹೆಣ್ಣುಗಳಂತೆ ವರ್ತಿಸದಿದ್ದರೂ, ಕೆಲವು ಬದಲಾವಣೆಗಳು ಕಂಡುಬಂದವು. ಆದರೆ ಬಿಪಿಎ ಸೋಂಕಿದ ಗಂಡು ಇಲಿಗಳಿಂದ ಹೆಣ್ಣು ಇಲಿಗಳು ದೂರವಾಗುವುದನ್ನು ವಿಜ್ಞಾನಿಗಳು ಗಮನಿಸಿದ್ದಾರೆ. ಹೀಗಾಗಲು ಪ್ರಮುಖ ಕಾರಣ ಗಂಡು ಇಲಿಗಳು ಹೆಣ್ಣು ಇಲಿಗಳನ್ನು ಆಕರ್ಷಿಸಲು ಬೇಕಾದ ಅಗತ್ಯ ಗುಣಗಳನ್ನು ಕಳೆದುಕೊಂಡಿವೆಯಂತೆ.

ಬಿಪಿಎ ಮನುಷ್ಯರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ವಿಜ್ಞಾನಿಗಳು ತಮ್ಮ ಸಂಶೋಧನೆಯನ್ನು ಮುಂದುವವರಿಸಿದ್ದಾರಂತೆ. ಇಲಿಗಳ ಮೇಲೆ ನಡೆಸಿದ ಸಂಶೋಧನೆಯು ದೀರ್ಘಕಾಲದ್ದಾಗಿರುವುದರಿಂದ ಮನುಷ್ಯರ ಮೇಲಿನ ಸಂಶೋಧನೆಯ ಫಲಿತಾಂಶವೂ ಬಹಳ ತಡವಾಗಿಯೇ ಬರಲಿದೆ. ಏಕೆಂದರೆ ಮಕ್ಕಳಿರುವಾಗ ಬಿಪಿಎ ರಾಸಾಯನಿಕ ಸೋಂಕಿದರೆ ಅದರ ಪರಿಣಾಮ ಅವರ ಮೇಲೆ ಹೇಗಾಗುತ್ತದೆ ಎಂಬುದು ಇನ್ನೂ ತಿಳಿಯಬೇಕಿದೆ.

## ದಪ್ಪಗಾಗಿಸಲಿರುವ ಡಯಟ್ ಡ್ರಿಂಕ್

ಆರೋಗ್ಯ ಕಾಳಜಿವುಳ್ಳವರಿಗೆ ಡಯಟ್ ಪಾನೀಯಗಳು ಉತ್ತಮ ಆಯ್ಕೆ. ಆದರೆ ಡಯಟ್ ಪಾನೀಯಗಳನ್ನು ಕುಡಿಯುವುದೇ ಗೀಳಾಗಿಸಿಕೊಂಡವರು ಇನ್ನಷ್ಟು ದಪ್ಪಗಾಗುವುದರಲ್ಲಿ ಅನುಮಾನವಿಲ್ಲ ಎಂದು ಟೆಕ್ಸಾಸ್ ವಿಶ್ವವಿದ್ಯಾಲಯ ವಿಜ್ಞಾನಿಗಳು ಹೇಳಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ಡಯಟ್ ಪಾನೀಯದ ಮೇಲೆ ನಡೆಸಿದ ಸಂಶೋಧನೆಯಲ್ಲಿ 500 ಮಂದಿ ಪಾಲ್ಗೊಂಡಿದ್ದರು. ಇವರೆಲ್ಲ ಕಡಿಮೆ ಕ್ಯಾಲೋರಿಗಾಗಿ ಅತಿಯಾಗಿ ಡಯಟ್ ಪಾನೀಯ ಕುಡಿದವರು. ಆದರೆ ಇವರ ಸೊಂಟದ ಸುತ್ತ ಕೊಬ್ಬು ಶೇಖರಗೊಂಡಿತ್ತು. ಇದು ಎಷ್ಟರ ಮಟ್ಟಿಗೆ ಎಂದರೆ ಸಕ್ಕರೆ ಅಂಶವಿರುವ ಪಾನೀಯ ಕುಡಿದವರಿಗಿಂತ ತುಸು ಹೆಚ್ಚಾಗಿಯೇ ಇತ್ತು.

ಡಯಟ್ ಪಾನೀಯ ಕುಡಿಯುವುದನ್ನೇ ಗೀಳಾಗಿಸಿಕೊಂಡ ಅನೇಕರಲ್ಲಿ ಕೊಬ್ಬು ಶೇಖರಣೆ ಸಾಮಾನ್ಯರಿಗಿಂತ ಐದು ಪಟ್ಟು ಹೆಚ್ಚಾಗಿದ್ದು ಕಂಡುಬಂದಿದೆ. ಡಯಟ್ ಪಾನೀಯಗಳು ಸಕ್ಕರೆಯಿಂದ ಮುಕ್ತವಾಗಿರಬಹುದು. ಆದರೆ ಅವುಗಳ ಗುಣದಿಂದ ಮುಕ್ತವಾಗಿರುವುದಿಲ್ಲ. ಹೀಗಾಗಿ ಇದನ್ನು ಅತಿಯಾಗಿ ಸೇವಿಸುವುದರಿಂದ ಆಗಬಹುದಾದ ಎಲ್ಲಾ ರೀತಿಯ ತೊಂದರೆಗಳು ಸಂಭವಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ವಿಜ್ಞಾನಿ ಪ್ರೊ.ಹೆಲೆನ್ ಹಝುಡಾ ಹೇಳುತ್ತಾರೆ.

474 ವಯಸ್ಕರನ್ನು ಒಳಗೊಂಡ ಈ ಅಧ್ಯಯನವು ಒಂಬತ್ತೂವರೆ ವರ್ಷಗಳ ಕಾಲ ನಡೆಯಿತು. ನಿಯಮಿತಕ್ಕಿಂತ ತುಸು ಹೆಚ್ಚು ಡಯಟ್ ಪಾನೀಯ ಕುಡಿದವರಲ್ಲಿ ಕೊಬ್ಬು ಶೇಖರಣೆ ಶೇ.70ರಷ್ಟು ವೇಗವಾಗಿ ಬೆಳೆದಿದೆ.

■ ಇಎಸ್‌ಎಸ್

